ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.
ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 8-11-2016

## ಪತ್ರಿಕಾ ಆಮಂತ್ರಣ

1. ಪತ್ರಿಕಾಗೋಷ್ಠಿ:
"ಮಕ್ಕಳ ಚಿತ್ರಕಲಾ ಶಿಬಿರ" ಕುರಿತಂತೆ.
ಅಧ್ಯಕ್ಷರು, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.
ದಿನಾಂಕ: 09-11-2016 ಬುಧವಾರ, ಸಮಯ: ಬೆಳಿಗ್ಗೆ 11-00 ಗಂಟೆಗೆ
ಸ್ಥಳ: ಅಧ್ಯಕ್ಷರ ಕೊಠಡಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಎರಡನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳುರು – 560 002.

## ಪತ್ರಿಕಾ ಪ್ರಕಟಣೆ

# ಬ್ರಿಟನ್ ಪ್ರಧಾನಿ ಬೆಂಗಳೂರು ಭೇಟಿ

ಬೆಂಗಳೂರು, ನವೆಂಬರ್ 8 (ಕರ್ನಾಟಕ ವಾರ್ತೆ)

ಬ್ರಿಟನ್ ದೇಶದ ಪ್ರಧಾನ ತೆರೇಸಾ ಮೇ ಅವರು ಇಂದು ಬೆಳಿಗ್ಗೆ ಬೆಂಗಳೂರಿಗೆ ಒಂದು ದಿನದ ಭೇಟಿಗಾಗಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ಅವರನ್ನು ವಿಮಾನ ನಿಲ್ದಾಣದಲ್ಲಿ ಪ್ರವಾಸೋದ್ಯಮ ಸಚಿವ ಪ್ರಿಯಾಂಕ ಖರ್ಗೆ ಅವರು ಬರಮಾಡಿಕೊಂಡರು. ಈ ಸಂದರ್ಭದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಸುಭಾಷ್ ಚಂದ್ರ ಕುಂಠಿಯಾ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿ ಟಿ.ಕೆ. ಅನಿಲ್‍ಕುಮಾರ್, ಪೊಲೀಸ್ ಮಹಾ ನಿರ್ದೇಶಕ ಓಂ ಪ್ರಕಾಶ್ ಅವರು ಉಪಸ್ಥಿತರಿದ್ದರು.

ನಗರದ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಶ್ರೀಮತಿ ತೆರೇಸಾ ಮೇ ಅವರು ಸಂಜೆ 5-45 ಗಂಟೆಗೆ ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬ್ರಿಟನ್‍ಗೆ ತೆರಳಿದರು. ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಬೃಹತ್ ಕೈಗಾರಿಕಾ ಸಚಿವ ಆರ್. ವಿ. ದೇಶಪಾಂಡೆ ಅವರು ಬ್ರಿಟನ್ ಪ್ರಧಾನಿ ಅವರನ್ನು ಬೀಳ್ಕೊಟ್ಟರು. ಈ ಸಂದರ್ಭದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಸುಭಾಷ್ ಚಂದ್ರ ಕುಂಠಿಯಾ, ಸಿಬ್ಬಂದಿ ಮತ್ತು ಆಡಳಿತ

ಸುಧಾರಣಾ ಇಲಾಖೆಯ ಕಾರ್ಯದರ್ಶಿ ಟಿ. ಕೆ. ಅನಿಲ್‌ಕುಮಾರ್, ಪೊಲೀಸ್ ಮಹಾ ನಿರ್ದೇಶಕ ಓಂ. ಪ್ರಕಾಶ್, ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಕೆ. ಗೋಪಾಲಯ್ಯ ಅವರು ಉಪಸ್ಥಿತರಿದ್ದರು.

ಎಸ್‌ಎಂ:ಜೆಡಿ:ಜಿಪಿಆರ್.

## ಬೆಂಗಳೂರು ಐ.ಟಿ.ಇ ಬಿಜ್ –2016

ಬೆಂಗಳೂರು, ನವೆಂಬರ್ 8 (ಕರ್ನಾಟಕ ವಾರ್ತೆ)

ಕರ್ನಾಟಕ ಮಾಹಿತಿ ತಂತ್ರಜ್ಞಾನ ಮತ್ತು ವಿದ್ಯುನ್ಮಾನ ಕ್ಷೇತ್ರದ ಪ್ರಮುಖ ಕಾರ್ಯಕ್ರಮ ಬೆಂಗಳೂರು ಐ.ಟಿ.ಇ ಬಿಜ್ – 2016 ಇದೇ ನವೆಂಬರ್ 28 ರಿಂದ 30 ರವರೆಗೆ ಅರಮನೆ ಮೈದಾನದಲ್ಲಿ ನಡೆಯಲಿದೆ.

ಕರ್ನಾಟಕ ಸರ್ಕಾರದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಬೆಂಗಳೂರಿನ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಬೆಂಗಳೂರು ನಗರವು ಐ.ಟಿ. ರಫ್ತಿನಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದ್ದು ವಿಶ್ವದ 2ನೇ ಬೃಹತ್ ತಂತ್ರಜ್ಞಾನ ತಾಣವಾಗಿದೆ. ಬಹುರಾಷ್ಟ್ರೀಯ ಕಂಪೆನಿಗಳು ಸೇರಿದಂತೆ ಅನೇಕ ಕಂಪೆನಿಗಳು ತಮ್ಮ ನವೀನ ಮಾದರಿಯ ತೀವ್ರ ವೇಗದ ತಂತ್ರಜ್ಞಾನ ಅವಿಷ್ಕಾರಗಳಿಗೆ ಒತ್ತು ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ್.

**ಛಾಯಾಚಿತ್ರ ಶೀರ್ಷಿಕೆ:**

**ಬ್ರಿಟನ್ ದೇಶದ ಪ್ರಧಾನಿ ತೆರೇಸಾ ಮೇ ಅವರು ಇಂದು ತರಹುಣಸೆಯಲ್ಲಿ ಬ್ರಿಟೀಷ್ ಅಂಬಾಸಿ ಗ್ರೂಪ್‌ನಿಂದ ನಿರ್ಮಿಸಿರುವ ಸ್ಟೋನ್‌ಹಿಲ್ ಸರ್ಕಾರಿ ಶಾಲೆಗೆ ಭೇಟಿ ನೀಡಿ ಮಕ್ಕಳ ಕಲೆಯನ್ನು ವೀಕ್ಷಿಸಿದರು. ನಂತರ ಶಾಲೆಯ ಆವರಣದಲ್ಲಿ ನೂರಾರು ಮಕ್ಕಳ ಮಧ್ಯೆ ನಿಂತು ಏರ್‌ಶೋ ವೀಕ್ಷಿಸಿ ಆನಂದಿಸಿ ಮಕ್ಕಳೊಂದಿಗೆ ಸಂಭ್ರಮಿಸಿದರು. ಇವರೊಂದಿಗೆ ಅಂಬಾಸಿ ಗ್ರೂಪ್ ಛೇರಮೆನ್ ಜಿತುವೀರ್‌ವಾಣಿ, ಸಿ.ಇ.ಓ. ಮೈಕ್‌ಹೊಲೆಂಡ್, ನಿರ್ದೇಶಕ ಆದಿತ್ಯ ನಿರ್ವಾಣ, ದಕ್ಷಿಣ ವಲಯದ ಐ.ಜಿ.ಪಿ. ಸೀಮಂತ್‌ಕುಮಾರ್ ಸಿಂಗ್, ಜಿಲ್ಲಾಧಿಕಾರಿ ವಿ.**

ಶಂಕರ್, ಆಡಳಿತ ಸುಧಾರಣೆ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ. ಕೆ. ಅನಿಲ್‌ಕುಮಾರ್, ಮುಖ್ಯ ಕಾರ್ಯದರ್ಶಿ ಸುಭಾಷ್‌ಚಂದ್ರ ಕುಂಠಿಯಾ ಸೇರಿದಂತೆ ಹಲವಾರು ಹಿರಿಯ ಪೊಲೀಸ್ ಅಧಿಕಾರಿಗಳು, ಶಿಕ್ಷಣ ಇಲಾಖೆ ಅಧಿಕಾರಿಗಳು ಸಂಸ್ಥೆಯ ಆಡಳಿತಾಧಿಕಾರಿಗಳು ಪ್ರಧಾನಿಯೊಂದಿಗಿದ್ದರು. ಈ ಸಂದರ್ಭದಲ್ಲಿ ಆಕರ್ಷಕ ಏರ್‌ಶೋ ನಡೆಯಿತು.

## ಎಸಿಬಿ ಬಲೆಗೆ ಇಬ್ಬರು ವಾಣಿಜ್ಯ ತೆರಿಗೆ ಅಧಿಕಾರಿಗಳು

ಬೆಂಗಳೂರು, ನವೆಂಬರ್ 8 (ಕರ್ನಾಟಕ ವಾರ್ತೆ)

ಕೋರಮಂಗಲ ವಾಣಿಜ್ಯ ತೆರಿಗೆ ಇಲಾಖೆ ಸಹಾಯಕ ಆಯುಕ್ತ ಮತ್ತು ವ್ಯಾಟ್ ಅಧಿಕಾರಿ ನಯೀಮುಲ್ಲಾ ಖಾನ್ ಹಾಗೂ ಜಂಟಿ ಆಯುಕ್ತ ವಾಣಿಜ್ಯ ತೆರಿಗೆ ಸತೀಶ್ ಕುಮಾರ್ ಎಲ್. ರವರುಗಳು ಭ್ರಷ್ಟಾಚಾರ ತಡೆ ಕಾಯ್ದೆ ಅಡಿಯಲ್ಲಿ ಲಂಚ ಸ್ವೀಕಾರ ಸಮಯದಲ್ಲಿ ಎ.ಸಿ.ಬಿ. ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ.

ಬೆಂಗಳೂರು ನಗರದ ಖಾಸಗಿ ಕಂಪನಿಯ ವತಿಯಿಂದ ವ್ಯಾಟ್ ತೆರಿಗೆಯನ್ನು ಪಾವತಿಸಲಾಗಿದ್ದು ನಂತರ ವಹಿವಾಟಿನ ಲೆಕ್ಕಾಚಾರದ ಪ್ರಕಾರ ಈ ಕಂಪನಿಯಿಂದ ಸುಮಾರು ರೂ.6,00,000/- ಗಳ ಮೊತ್ತದ ಹೆಚ್ಚುವರಿ ವ್ಯಾಟ್ ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸಿರುವುದಾಗಿ ಲೆಕ್ಕಾಚಾರದಲ್ಲಿ ಕಂಡುಬಂದಿದ್ದು, ನಿಯಮಾನುಸಾರ ವಾಣಿಜ್ಯ ತೆರಿಗೆ ಇಲಾಖೆಯಿಂದ ಈ ಮೊತ್ತವನ್ನು ಕಂಪನಿಗೆ ಮರುಪಾವತಿ ಮಾಡಬೇಕಾಗಿರುತ್ತದೆ. ಕಂಪನಿಯಿಂದ ಪಾವತಿಸಿರುವ ಹೆಚ್ಚುವರಿ ವ್ಯಾಟ್ ತೆರಿಗೆಯ ಮೊತ್ತವನ್ನು ಕಂಪನಿಗೆ ಮರುಪಾವತಿ ಮಾಡುವಂತೆ ಕಂಪನಿಯ ಪ್ರತಿನಿಧಿಗಳು ಸಂಬಂಧಪಟ್ಟ ವಾಣಿಜ್ಯ ತೆರಿಗೆ ಅಧಿಕಾರಿಗಳ ಕಛೇರಿಗೆ ಮನವಿಯನ್ನು ಸಲ್ಲಿಸಿದ್ದರು, ಇದಕ್ಕೆ ಪೂರಕವಾಗಿ ಮೇಲ್ಕಂಡ ಅಧಿಕಾರಿಗಳು 60,000 ರೂ. ಮೊತ್ತದ ಬೇಡಿಕೆ ಇಟ್ಟಿದ್ದರು. ದೂರುದಾರರು ನೀಡಿದ ದೂರಿನ ಅನ್ವಯ ಬೆಂಗಳೂರು ನಗರ ಎಸಿಬಿ ಅಧಿಕಾರಿ ಹಾಗೂ ಸಿಬ್ಬಂದಿಗಳು ಪ್ರಕರಣವನ್ನು ದಾಖಲಿಸಿ ಲಂಚ ಸ್ವೀಕರಿಸುವ ಸಮಯದಲ್ಲಿ ದಸ್ತಗಿರಿ ಮಾಡಿದ್ದಾರೆ.

## ರೇಷ್ಮೆ ಸೀರೆಯಲ್ಲಿ ಸೋಮೇಶ್ವರದ ದರ್ಶನ ಮಾಡಿದ ಬ್ರಿಟನ್ ಪ್ರಧಾನಿ

ಬೆಂಗಳೂರು, ನವೆಂಬರ್ 8 (ಕರ್ನಾಟಕ ವಾರ್ತೆ)

ಬ್ರಿಟನ್ ಪ್ರಧಾನ ಮಂತ್ರಿ ತೆರೇಸಾ ಮೇ ಅವರು ಚಿನ್ನದ ಬಣ್ಣದ ರೇಷ್ಮೆ ಸೀರೆಗೆ ಹಸಿರು ಬಣ್ಣದ ಕುಪ್ಪಸ ತೊಟ್ಟು ಸೋಮೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದರು.

ಅಪ್ಪಟ ಭಾರತೀಯ ನಾರಿಯಂತೆ ಚಿನ್ನದ ಬಣ್ಣದ ಸೀರೆಯಲ್ಲಿ ಕಂಗೊಳಿಸುತ್ತಿದ್ದ ಬ್ರಿಟನ್ ಪ್ರಧಾನಿಯವರು ಇಂದು ಮಧ್ಯಾಹ್ನ ಅಲಸೂರಿನಲ್ಲಿರುವ ಐತಿಹಾಸಿಕ ಸೋಮೇಶ್ವರ ದೇವಸ್ಥಾನಕ್ಕೆ ಆಗಮಿಸಿದಾಗ, ದೇವಸ್ಥಾನ ದ್ವಾರದಲ್ಲಿ ಮಲ್ಲಿಗೆ ಹಾರಹಾಕಿ, ನಾದಸ್ವರ ನುಡಿಸುವ ಮೂಲಕ ಬರಮಾಡಿಕೊಳ್ಳಲಾಯಿತು.

ಒಂದು ದಿನದ ಬೆಂಗಳೂರು ಭೇಟಿಗಾಗಿ ಆಗಮಿಸಿದ್ದ ಅವರಿಗೆ ನಗರದ ಪುರಾತನ ದೇವಸ್ಥಾನಗಳಲ್ಲಿ ಒಂದಾದ ಈ ದೇವಸ್ಥಾನವನ್ನು ತೋರಿಸಲು ಅನುವು ಮಾಡಿಕೊಡಲಾಗಿತ್ತು.

ದೇವಸ್ಥಾನ ಪ್ರವೇಶಿಸುತ್ತಿದ್ದಂತೆ ದೇವಸ್ಥಾನದ ಇಬ್ಬರು ಪ್ರಧಾನ ಅರ್ಚಕರೊಂದಿಗೆ ದೇವಸ್ಥಾನವನ್ನು ಪ್ರದಕ್ಷಣೆ ಮಾಡುತ್ತಾ ಅವರಿಂದಲೇ ಈ ದೇವಸ್ಥಾನದ ಇತಿಹಾಸದ ಕುರಿತು ಮಾಹಿತಿಯನ್ನು ಪಡೆದುಕೊಂಡರು.

ಪ್ರದಕ್ಷಣೆ ಮುಗಿದ ಕೂಡಲೇ ಗರ್ಭಗುಡಿಯಲ್ಲಿರುವ ಶಿವಲಿಂಗಕ್ಕೆ ಪೂಜೆ ಸಲ್ಲಿಸಿದ ನಂತರ ಉಯ್ಯಾಲೆ ಮಂಟಪದಲ್ಲಿರುವ ಸೋಮೇಶ್ವರನಿಗೆ ಪೂಜೆ ಸಲ್ಲಿಸಿ, ದೇವರಿಗೆ ಕೈಮುಗಿದು ನಮಸ್ಕಾರ ಮಾಡಿದ ನಂತರ ಮಂಗಳಾರತಿಯನ್ನು ಸ್ವೀಕರಿಸಿ ದೇವರ ದರ್ಶನವನ್ನು ಪಡೆದರು.

ಸೋಮೇಶ್ವರನ ದರ್ಶನ ಮುಗಿಸಿ ತೆರಳುವ ಸಂದರ್ಭದಲ್ಲಿ ದೇವಸ್ಥಾನದ ವತಿಯಿಂದ ಮುಜರಾಯಿ ಇಲಾಖೆಯ ಆಯುಕ್ತರಾದ ಎಸ್. ಪಿ. ಷಡಕ್ಷರಿಸ್ವಾಮಿ ಮತ್ತು ನಗರ ಜಿಲ್ಲಾಧಿಕಾರಿ ವಿ. ಶಂಕರ್ ಅವರು ತೆರೇಸಾ ಮೇ ಅವರಿಗೆ ಶಾಲು ಹೊದಿಸಿ ನಟರಾಜನ ಗಂಧದ ಪ್ರತಿಮೆಯನ್ನು ನೀಡಿ ಗೌರವ ಸಲ್ಲಿಸಿದರು.

:ಜೆಡಿ:ಬಿಜಿಪಿಜಿಪಿಆರ್.

## 9th BENGALURU INTERNATIONAL FILM FESTIVAL-BIFFES -201

**Bangalore, November 8, 2016:**

International Film Festivals are global forums for presenting the films made across the continents, generally other than the big commercial ventures. It is also the platform for revisiting classics, evolution of artistic talents in different countries. Almost all the major cities of the world have an international film festival in their annual calendar of cultural events.

Govt. of India started organizing International Film Festival from 1952 and now Goa has been chosen as its permanent venue.

In Bengaluru, the initiative took off in 2006. The first three editions were organized with the financial support from the Govt. of Karnataka. Since 2009, Government of Karnataka is organizing International Fim Festivals through the Department of Information and Public

Relations and Karnataka Chalanachitra Academy. The last five editions have been directly organized by them. The 8th edition of the festival held in January – February 2016 was held simultaneously in Bengaluru and Mysuru and was a resounding success.

The main objective was to bring the world cinema to Bengaluru. It was therefore branded as "World in Bengaluru". Now the scope of the festival has been widened. It is not just "World in Bengaluru" it is also "Bengaluru to the World". The added objective is to integrate Kannada cinema into the global arena

**Programmes and Events**

The Official Selection (Competition Sections for Kannada, Indian and Asian Cinema, Presentation of contemporary Cinema of the World) Parallel Sections (Retrospectives, Country Focus, etc) Special Theme Section, Festival in a Festival, Documentaries and Biopics, Academic activities (Master classes, Seminars, Workshops etc) Exhibitions, Networking are the main programmes of the ensuing film festival. This year there will also be a new section to showcase the best films of Popular entertainment as well.

Indian Film Industry in general and Kannada Film Industry in particular, film professionals, general film loving public, film media and intellectuals, writers and artistes of all persuasions are supposed to be the target group of this festival.

**Awards**

Best Indian Film in Competition, Best Kannada Film in Competition, and Best Asian Film (amongst selection) are the awards' category. A new category of award for the best amongst the popular entertainment cinema in Kannada is also being introduced from this year.

**9th Bengaluru International Film Festival: BIFFES**

An organizing Committee has been formed for the effective conduct of BIFFES. Shri. Siddaramaiah, Honorable Chief Minister of Karnataka, is heading this committee in the capacity of Chairman. The Committee which has 13 other members includes The Hon'ble Minister for Public Works and Mysuru District- in charge Minister Dr.H.C. Mahadevappa, Hon'ble Minister of State for Tourism Sri. Priyanka Kharge, Sri M.Lakshminarayana, Principal Secretary, Information and Public Relations Department and PWD, S.V.Rajendrasingh Babu, Chairman, Karnataka Chalanachitra Academy, Dr.Jayamala, renowned artist and Member, Legislative Council, Sri Muniratna, Hon'ble member of Legislative Assembly and Film Producer, President, Karnataka Film Chamber of Commerce, Dr. Girish Kasaravalli, Renowned Film Maker, P. Seshadri, Noted Director, Senior Artist Sri Shivraj Kumar, Sri Girish Rao (Jogi), Journalist, the Director, Department of Information and Public Relations and the Registrar, Karnataka Chalanachitra Academy, as the member Secretary.

**9th Edition of BIFFES is scheduled to be held from 02-09 February 2017 at both Bengaluru and Mysuru simultaneously. It is proposed to be held in a single multiplex at**

**the centre of the cities. It is going to be more inclusive with greater participation from the Kannada and Indian Film Industry.**

**Festival so far**

Festival has grown at 35% every year. The quality of Kannada films competition has considerably improved. The festival last year had attracted more than 6,000 delegates. All the Indian filmmakers whose films got selected for the competition attended the festival. Nearly 25 important foreign delegates have graced the festival last year, BIFFES has proved to be one of the important and prestigious International Film festivals in India.

**Future Plans**

It is intended to create a co-production market to increase in the production of quality Kannada films with International producers. It is also the intention of the Karnataka Chalanachitra Academy to create a film bazaar for promotion of Kannada cinema overseas. It also intends to garner collaboration with other partners to start experimental and short film sections.

# 9ನೇ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವ

ಬೆಂಗಳೂರು, ನವೆಂಬರ್ 8 (ಕರ್ನಾಟಕ ವಾರ್ತೆ)

ವಾಣಿಜ್ಯ ಉದ್ದೇಶವಿಲ್ಲದೆ ನಿರ್ಮಿಸಿದ, ಜಗತ್ತಿನ ಅತ್ಯುತ್ತಮ ಚಿತ್ರಗಳನ್ನು ನೋಡಲು ಅವಕಾಶ ಕಲ್ಪಿಸುವ ವೇದಿಕೆ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳು. **ವಿವಿಧ ದೇಶಗಳಲ್ಲಿನ ಕಲಾತ್ಮಕ ಪ್ರತಿಭೆಗಳ ಪರಿಚಯ ಮತ್ತು ಅತ್ಯುತ್ತಮ ಸಿನಿಮಾಗಳ ವೀಕ್ಷಣೆಗೊಂದು ವೇದಿಕೆ.**

ಜಗತ್ತಿನ ಬಹುತೇಕ ಎಲ್ಲ ಪ್ರಮುಖ ನಗರಗಳಲ್ಲಿಯೂ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳು ಜರುಗುತ್ತವೆ. ಭಾರತ ಸರ್ಕಾರ ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು 1952 ರಿಂದ ಪ್ರಾರಂಭಿಸಿತು. ಈಗ ಭಾರತದಲ್ಲಿ "ಗೋವಾ" ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಕೇಂದ್ರವಾಗಿದೆ.

ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಚಾಲನೆ ದೊರೆತದ್ದು 2006 ರಲ್ಲಿ. 2009 ರಿಂದ ಕರ್ನಾಟಕ ಸರ್ಕಾರವು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿಯ ಮೂಲಕ ಅಂತರರಾಷ್ಟ್ರೀಯ ಚಲನಚಿತ್ರೋತ್ಸವನ್ನು ಸಂಘಟಿಸುತ್ತಿದೆ.

"ಬೆಂಗಳೂರಿನಲ್ಲಿ ಜಗತ್ತು" ಎನ್ನುವುದು ನಮ್ಮ ಚಿತ್ರೋತ್ಸವದ ಆಶಯ. ಜಗತ್ತಿನ ಸಿನಿಮಾಗಳನ್ನು ಬೆಂಗಳೂರಿಗೆ ಪರಿಚಯಿಸುವುದು ಇದರ ಹಿನ್ನೆಲೆ. ಚಿತ್ರೋತ್ಸವದ ಆಶಯ "ಬೆಂಗಳೂರಿನಲ್ಲಿ ಜಗತ್ತು" ಎಂದಿದ್ದುದು ಈಗ "ಜಗತ್ತಿಗೆ ಬೆಂಗಳೂರು" ಎಂದು ಬದಲಾಗಬೇಕು ಎನ್ನುವ ಉದ್ದೇಶವನ್ನು ಅಕಾಡೆಮಿಯು ಹೊಂದಿದೆ.

ಕನ್ನಡ, ಭಾರತೀಯ ಹಾಗೂ ಏಷಿಯನ್ ಚಲನಚಿತ್ರಗಳ ಸ್ಪರ್ಧಾ ವಿಭಾಗ, ಸಮಕಾಲೀನ ಜಾಗತೀಕ ಚಿತ್ರಗಳ ಪ್ರದರ್ಶನ, ಸಮಾನಾಂತರ ವಿಭಾಗಗಳು, ಯಾವುದಾದರೊಂದು ನಿರ್ದಿಷ್ಟ ದೇಶದ ಕುರಿತು ವಿಶೇಷ ಗಮನ, ನಿರ್ದಿಷ್ಟ ನಿರ್ದೇಶಕರ ಎಲ್ಲಾ ಚಿತ್ರಗಳ ಪ್ರದರ್ಶನ ಮೊದಲಾದವು ಈ ಅಂತರರಾಷ್ಟ್ರೀಯ ಚಿತ್ರೋತ್ಸವದ ಕಾರ್ಯಕ್ರಮದ ಭಾಗಗಳಾಗಿವೆ.

**ಸಿನಿಮಾ ಕುರಿತ ಅಕಾಡೆಮಿಕ್ ಅಧ್ಯಯನಕ್ಕಾಗಿ ವಿಚಾರ ಸಂಕಿರಣಗಳು, ಶಿಬಿರಗಳು, ಪರಿಣಿತರಿಂದ ಕಲಿಕಾ ಸೆಷನ್‌ಗಳು ಇತ್ಯಾದಿ ಸಹ ಸಂಘಟಿಸಲಾಗುತ್ತಿದೆ.**

**ಭಾರತೀಯ ಹಾಗೂ ಕನ್ನಡ ಚಿತ್ರೋದ್ಯಮದ ಆಸಕ್ತರು. ಚಿತ್ರೋದ್ಯಮಿಗಳು.ಚಿತ್ರ ಪ್ರೇಮಿಗಳು.ಚಿತ್ರ ಮಾಧ್ಯಮ ಸಾಂಸ್ಕೃತಿಕ ವಲಯದ ಲೇಖಕರು, ವಿಮರ್ಶಕರು, ಅಧ್ಯಯನಿಗಳು ಹಾಗೂ ಆಸಕ್ತರು ಚಿತ್ರೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ.**

**<u>ಈ ಚಿತ್ರೋತ್ಸವದಲ್ಲಿ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.</u>**

**ಸ್ಪರ್ಧಾ ವಿಭಾಗದಲ್ಲಿ ಅತ್ಯುತ್ತಮ ಭಾರತೀಯ ಚಿತ್ರ, ಅತ್ಯುತ್ತಮ ಕನ್ನಡ ಚಿತ್ರ, ಅತ್ಯುತ್ತಮ ಏಷ್ಯಾದ ಚಿತ್ರ ಎಂದು ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.**

**ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವ-9**

ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗೌರವ ಅಧ್ಯಕ್ಷತೆಯಲ್ಲಿ ಅಂತರರಾಷ್ಟ್ರೀಯ ಚಿತ್ರೋತ್ಸವ-9 ರ ಸಂಘಟನಾ ಸಮಿತಿಯನ್ನು ರಚಿಸಲಾಗಿದೆ. ದಿನಾಂಕ 08-11-2016 ರಂದು ಈ ಸಮಿತಿ ಸಭೆ ಸೇರಿ ಚಿತ್ರೋತ್ಸವದ ಸಂಘಟನೆಯ ಕುರಿತು ಚರ್ಚಿಸಿದೆ. **ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವ-8** ಅನ್ನು **ಫೆಬ್ರವರಿ 2017** ರಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ. ನಗರದ ಕೇಂದ್ರ ಭಾಗದಲ್ಲಿರುವ ಯಾವುದಾದರೊಂದು ವಿವಿಧ ತೆರೆಗಳ ಸಿನಿಮಾ ಸಂಕೀರ್ಣ (ಮಲ್ಟಿಪ್ಲೆಕ್ಸ್) ಒಂದರಲ್ಲಿ ಚಿತ್ರಪ್ರದರ್ಶನಗಳ ಏರ್ಪಾಡಿಗಾಗಿ ವ್ಯವಸ್ಥೆ ಮಾಡಲಾಗುತ್ತಿದೆ.

**ಈವರೆಗಿನ ಚಿತ್ರೋತ್ಸವದ ಪ್ರಗತಿ** :

ಬೆಂಗಳೂರಿನ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಬೆಳವಣಿಗೆ ಪ್ರತಿವರ್ಷ ಶೇ.35 ರಷ್ಟು ದಾಖಲಾಗಿದೆ. ಸ್ಪರ್ಧಾ ವಿಭಾಗದಲ್ಲಿ ಭಾಗವಹಿಸುತ್ತಿರುವ ಕನ್ನಡ ಚಿತ್ರಗಳ ಗುಣಮಟ್ಟ ವರ್ಷದಿಂದ ವರ್ಷಕ್ಕೆ ಉತ್ತಮಗೊಳ್ಳುತ್ತ ನಡೆದಿದೆ. 2016 ರಲ್ಲಿ ನಡೆದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ 6000 ಕ್ಕಿಂತ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ. 25 ಕ್ಕಿಂತ ಹೆಚ್ಚು ವಿದೇಶಿ ಪ್ರತಿನಿಧಿಗಳು ಕಳೆದ ಚಿತ್ರೋತ್ಸವದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಸ್ಪರ್ಧಾ ವಿಭಾಗಕ್ಕೆ ಆಯ್ಕೆಯಾದ ಎಲ್ಲಾ ಭಾರತೀಯ ಚಿತ್ರಗಳ ನಿರ್ದೇಶಕ/ನಿರ್ಮಾಪಕರು ಚಿತ್ರೋತ್ಸವದಲ್ಲಿ ಭಾಗವಹಿಸಿದ್ದಾರೆ.ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಇಂದು ಅಂತರರಾಷ್ಟ್ರೀಯ ಮಟ್ಟದ ಮೆರುಗು. ಇದೀಗ ಅದು ಭಾರತದಲ್ಲಿ ನಡೆಯುವ ಅತ್ಯಂತ ಪ್ರಮುಖ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳ ಪೈಕಿ ಮುಂಚೂಣಿಯಲ್ಲಿದೆ.

ಉತ್ಕೃಷ್ಟ ಗುಣಮಟ್ಟದ ಕನ್ನಡ ಚಿತ್ರಗಳ ತಯಾರಿಕೆಯಲ್ಲಿ ವಿದೇಶಿ ಚಿತ್ರ ನಿರ್ಮಾಪಕರು ಆಸಕ್ತಿ ತೋರುವಂತೆ ಒಂದು ಸಹಭಾಗಿತ್ವದ ವೇದಿಕೆಯನ್ನು ಸೃಜಿಸುವ ಆಲೋಚನೆ, ಕನ್ನಡ ಚಿತ್ರೋದ್ಯಮಕ್ಕೆ ವಿದೇಶೀ ತಂತ್ರಜ್ಞಾನ ಬೆಸೆವ ಆಶಯ, ಭಾರತದಿಂದಾಚೆಗೆ ಕನ್ನಡ ಸಿನಿಮಾಕ್ಕೆ ಬೇಡಿಕೆಯನ್ನು ಹುಟ್ಟಿಸಲು ಒಂದು ಸಿನಿಮಾ ಬಜಾರ್ ಸೃಷ್ಟಿಸುವ ಯೋಜನೆ ಮುಂತಾದುವು ಅಕಾಡೆಮಿ ಆಲೋಚಿಸಿರುವ ಭವಿಷ್ಯದ ಯೋಜನೆಗಳು.

ಪ್ರಯೋಗಾತ್ಮಕ ಚಿತ್ರಗಳು ಮತ್ತು ಕಿರುಚಿತ್ರಗಳ ತಯಾರಿಕೆಗಾಗಿ ಹೊಸ ಸಹಭಾಗಿತ್ವವನ್ನು ಹುಡುಕುವ ಒಂದು ದೂರದೃಷ್ಟಿಯ ಪ್ರಯತ್ನದ ಆಶಯ ಕೂಡಾ ಅಕಾಡೆಮಿಯದ್ದು.